# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಲೋಕ್/ಬಿಜಿಎಂ/4572/2022
ಮಂಡನಾಧಿಕಾರಿಗಳ ಶಾಖೆ, ಪಿ.ಓ. ಎ.ಆರ್.ಇ.17

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 02/05/2023

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ ಶ್ರೀ ವಿನಾಯಕ ತಂದೆ ಗೋಪಾಲ ಸುಗುರ, ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, ಧಾರವಾಡ, ಧಾರವಾಡ ಜಿಲ್ಲೆ ಇವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೊಲೀಸ್ ನಿರೀಕ್ಷರು, ಕರ್ನಾಟಕ ಲೋಕಾಯುಕ್ತ, ಗದಗ ಜಿಲ್ಲೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ದೂರುದಾರರಾದ ಶ್ರೀ ರವಿ ಪುರುಷೋತ್ತಮ, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಗದಗ (ಸ.ತ.ಪಿ.) ಎಂಬುವವರು ಗದಗ ಜಿಲ್ಲಾ ಆಡಳಿತ ಭವನದ ಮುಂಭಾಗದಲ್ಲಿ ಮೊದಲು ಇರುವ ಕಾಂಪೌಂಡ್ ಗೋಡೆಯನ್ನು ತೆಗೆದು ಬೇಸ್‌ಮೆಂಟಿನಿಂದ 8 ಅಡಿ ಎತ್ತರದ ಗ್ರಿಲ್ ಕಾಂಪೌಂಡ್ ನಿರ್ಮಿಸಿ ಮತ್ತು ಸುಮಾರು ರೂ. 60.00 ಲಕ್ಷ ಮೊತ್ತದ ಕಾಮಗಾರಿಯನ್ನು ನಿರ್ವಹಿಸಿ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, ಗದಗ ಜಿಲ್ಲೆ ಇವರು ಟೆಂಡರ್ ಪ್ರಕ್ರಿಯೆ ನಡೆಸಿ ಟೆಂಡರ್ ಕರೆದು ಜಿಲ್ಲಾ ಬುಲೇಟಿನ್‌ನಲ್ಲಿ ಪ್ರಕಟಿಸಿ, ಅರ್ಹ ಗುತ್ತಿಗೆದಾರರಿಂದ ಟೆಂಡರ್ ಸ್ವೀಕರಿಸಿ, ಕನಿಷ್ಟ ದರ ನಮೂದಿಸಿದ ಗುತ್ತಿಗೆದಾರರಿಗೆ ಕಾಮಗಾರಿ ನಿರ್ವಹಿಸುವ ಪ್ರಕ್ರಿಯೆಯನ್ನು ನಡೆಸದೆ ಕೆಟಿಪಿಪಿ ಕಾಯ್ದೆ 1999 ನ್ನು ಉಲ್ಲಂಘನೆ ಮಾಡಿ ಎದುರುದಾರರಾದ ಶ್ರೀ ವಿನಾಯಕ ತಂದೆ ಗೋಪಾಲ ಸುಗುರ, ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ ಬಂದರು

ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, ಧಾರವಾಡ, ಧಾರವಾಡ ಜಿಲ್ಲೆ ಇವರು ಹೊಂದಿರುವ ಸರ್ಕಾರಿ ಅಧಿಕಾರದ ಸ್ಥಾನವನ್ನು ದುರ್ಬಳಕೆ ಮಾಡಿಕೊಂಡಿರುವ ಆಪಾದನೆಯೊಂದಿಗೆ ಪ್ರಾಥಮಿಕ ತನಿಖಾ ವರದಿಯ ಮೇರೆಗೆ ಕರ್ನಾಟಕ ಲೋಕಾಯುಕ್ತ, ಗದಗ ಜಿಲ್ಲೆ ಪೋಲೀಸ್ ಠಾಣೆಗೆ ದಿನಾಂಕ 28/05/2014 ರಂದು ದೂರನ್ನು ನೀಡಿರುತ್ತಾರೆ. ಈ ಬಗ್ಗೆ ಕರ್ನಾಟಕ ಲೋಕಾಯುಕ್ತ, ಗದಗ ಜಿಲ್ಲೆ ಪೋಲೀಸ್ ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 04/2014 ರಲ್ಲಿ ಕಲಂ 13 (1)(ಸಿ)(ಡಿ) ಸಹ ವಾಚಕ 15 ಪಿ.ಸಿ. ಕಾಯ್ದೆ 1988 ಮತ್ತು 120(ಬಿ), 420, 465, 468, 477 (ಎ) ಸಹ ವಾಚಕ 34 ಐ.ಪಿ.ಸಿ. ಮತ್ತು 23 ಕೆಟಿಪಿಪಿ ಕಾಯ್ದೆ 1999 ರಡಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

2) ತನಿಖಾಧಿಕಾರಿಗಳು ದಿನಾಂಕ 09/06/2014 ರಂದು ಶ್ರೀ ಗುಡ್ಡಪ್ಪ ಗಂಗಪ್ಪ ದಂಡಗಿಹಳ್ಳಿ, ಪ್ರ.ದ.ಸ. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಾರ್ಯಾಲಯ, ಬಿಂಕದಕಟ್ಟಿ, ಗದಗ ಹಾಗೂ ಶ್ರೀ ಮಲ್ಲೇಶಪ್ಪ ಶಿವನಾಗಪ್ಪ ನಾಗಮ್ಮನವರ, ಉಪವಲಯ ಅರಣ್ಯಾಧಿಕಾರಿಗಳು, ವಲಯ ಅರಣ್ಯಾಧಿಕಾರಿಗಳ ಕಾರ್ಯಾಲಯ, ಬಿಂಕದಕಟ್ಟಿ, ಗದಗ ಇವರನ್ನು ಪಂಚರಾಗಿ ಬರ ಮಾಡಿಕೊಂಡು ಜಿಲ್ಲಾ ಆಡಳಿತ ಭವನ, ಗದಗದ ಗ್ರಿಲ್ ಕಾಂಪೌಂಡ್ ಕಾಮಗಾರಿಯ ಪರಿಶೀಲನಾ ಕಾಮಗಾರಿಯ ಪಂಚನಾಮೆಯನ್ನು ಮಧ್ಯಾಹ್ನ 1-30 ರಿಂದ 2-30 ರ ವರೆಗೆ ಹಾಗೂ 2-45 ರಿಂದ ಸಾಯಂಕಾಲ 4-00 ಘಂಟೆಯವರೆಗೆ ಪಂಚನಾಮೆ ಜರುಗಿಸಿ ಹಂತ ಹಂತವಾಗಿ ಫೋಟೋಗಳನ್ನು ತೆಗೆದಿರುತ್ತಾರೆ.

3) ದಿನಾಂಕ 09/09/2014 ರಂದು ಶ್ರೀ ಕೆ. ಸಿ. ಅಸುಂಡಿ, ಆರಕ್ಷಕ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಗದಗ ಇವರು ಶ್ರೀ ಹುಚ್ಚೇಶ್ ತಂದೆ ಅಂಬಣ್ಣಪ್ಪ ಬಂಡಿವಡ್ಡರ್, ಕಿರಿಯ ಅಭಿಯಂತರರು, ಹಾಗೂ ಶ್ರೀ ಶರಣಯ್ಯ ತಂದೆ ಪಂಚಾಕ್ಷರಯ್ಯ ಲಿಂಬಯ್ಯನಮಠ, ದ್ವಿ. ದ. ಸ. ಗದಗ ಬೆಟಗೇರಿ ನಗರ ಸಭೆ, ಗದಗ ಇವರನ್ನು ಬರ ಮಾಡಿಕೊಂಡು ಶ್ರೀ ರಮೇಶ ದೇಸಾಯಿ, ಪ್ರಭಾರಿ ಅಪರ ಜಿಲ್ಲಾಧಿಕಾರಿಗಳು, ಗದಗ ರವರು ತಾವು ತಂದಿರುವ ದಾಖಲೆಗಳಲ್ಲಿ ಜಿಲ್ಲಾಧಿಕಾರಿಗಳ

ಭವನದ ಕಟ್ಟಡ ಹಾಗೂ ಮುಂಭಾಗದ ಕಾಂಪೌಂಡ್ ಗೋಡೆ ನಿರ್ಮಾಣಕ್ಕೆ ಸಂಭಂಧಿಸಿದ 15 ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳು ಪ್ರಕರಣದ ತನಿಖೆಗಾಗಿ ಅವಶ್ಯವಿರುವುದಾಗಿ ತಿಳಿಸಿ ಜಪ್ತು ಮಾಡಿ ವಶಕ್ಕೆ ಪಡೆದಿರುತ್ತಾರೆ. ಮುಂದುವರೆದು ಸದರಿ ಅಧಿಕಾರಿಯವರು ಜಿಲ್ಲಾಧಿಕಾರಿಗಳ ಭವನ ಕಟ್ಟಡದ ಅಕ್ಕಪಕ್ಕ ಹಾಗೂ ಹಿಂಭಾಗದ ಕಾಂಪೌಂಡ್ ಗೋಡೆಯ ನಿರ್ಮಾಣಕ್ಕೆ ಸಂಬಂಧಿಸಿದ 9 ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಇದೇ ಜಪ್ತಿ ಪಂಚನಾಮೆಯಡಿ ಹಾಜರುಪಡಿಸಿದ್ದು, ತನಿಖಾಧಿಕಾರಿಗಳು ವಶಕ್ಕೆ ಪಡೆದು ಆರಕ್ಷಕ ಉಪಾಧೀಕ್ಷಕರ ಕಛೇರಿಯಲ್ಲಿ ಸಾಯಂಕಾಲ 4-00 ಘಂಟೆಯಿಂದ 5-00 ಘಂಟೆಯವರೆಗೆ ಪಂಚನಾಮೆ ಜರುಗಿಸಿರುತ್ತಾರೆ.

4) ದಿನಾಂಕ 14/10/2014 ರಂದು ಶ್ರೀ ವೀರೇಶ ತಂದೆ ಹಣಮಪ್ಪ ವಾಲ್ಮೀಕಿ, ದ್ವಿ.ದ.ಸ. ಹಾಗೂ ಶ್ರೀ ಬಸವರಾಜ ತಂದೆ ಗಿರಿಯಪ್ಪಗೌಡ ಕ್ಯಾತನಗೌಡ್ರ, ದ್ವಿ.ದ.ಸ. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಶಹರ ವಲಯ, ಗದಗ ಇವರನ್ನು ಪಂಚರಾಗಿ ಬರ ಮಾಡಿಕೊಂಡು ಶ್ರೀ ಕೆ. ಸಿ. ಅಸುಂಡಿ, ಆರಕ್ಷಕ ಉಪಾಧೀಕ್ಷಕರು, ಗದಗ ಇವರ ಸಮಕ್ಷಮ ಶ್ರೀ ಸಿ. ಮಲ್ಲಿಕಾರ್ಜುನ ತಂದೆ ಚಿಕ್ಕಹನುಮಯ್ಯ, ಸಹಾಯಕ ಇಂಜನೀಯರ್‌ರವರು ತಮ್ಮ ಮೇಲಾಧಿಕಾರಿಗಳ ಸೂಚನೆಯಂತೆ ಗದಗ ಜಿಲ್ಲಾಡಳಿತ ಭವನದ ಕಟ್ಟಡ ಹಾಗೂ ಮುಂಭಾಗದ ಕಾಂಪೌಂಡ್ ಗೋಡೆ ನಿರ್ಮಾಣಕ್ಕೆ ಸಂಬಂಧಿಸಿದ 12 ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಆರಕ್ಷಕ ಉಪಾಧೀಕ್ಷಕರ ಕಛೇರಿಯಲ್ಲಿ ಮಧ್ಯಾಹ್ನ 12-00 ಘಂಟೆಯಿಂದ 14-00 ಘಂಟೆಯವರೆಗೆ ಜಪ್ತಿ ಪಂಚನಾಮೆ ಜರುಗಿಸಿ ದಾಖಲೆಗಳನ್ನು ವಶಪಡಿಸಿಕೊಂಡಿರುತ್ತಾರೆ.

5) ದಿನಾಂಕ 16/10/2014 ರಂದು ಶ್ರೀ ಸಂಗಪ್ಪ ಕಲ್ಲಪ್ಪ ವಡ್ಡೀನ, ಕರವಸೂಲಿ ಸಹಾಯಕ, ಹಾಗೂ ಶ್ರೀ ಸುರೇಶ ಹನುಮಂತಪ್ಪ ಪೂಜಾರ, ಕರವಸೂಲಿ ಸಹಾಯಕ, ಗದಗ ಬೆಟಗೇರಿ ನಗರ ಸಭೆ, ಗದಗ ಇವರನ್ನು ಪಂಚರಾಗಿ ಬರ ಮಾಡಿಕೊಂಡು ಇವರ ಸಮಕ್ಷಮ ಶ್ರೀ ಚನ್ನಬಸವೇಶ ಗಂಗಪ್ಪ ಜಿನಗಾ, ಸಹಾಯಕ ಇಂಜನೀಯರ್ ಮತ್ತು

ಶ್ರೀ ಜಿ. ವಿಶ್ವನಾಥ ತಂದೆ ಬಸವರಾಜಪ್ಪ, ಸಹಾಯಕ ಇಂಜನೀಯರ್, ಗದಗ ರವರು ತಮ್ಮ ಮೇಲಾಧಿಕಾರಿಗಳ ಸೂಚನೆಯಂತೆ ಗದಗ ಜಿಲ್ಲಾಡಳಿತ ಭವನದ ಕಟ್ಟಡ ಮುಂಭಾಗದ ಕಾಂಪೌಂಡ್ ಗೋಡೆ ದುರಸ್ತಿ ಕಾಮಗಾರಿಗೆ ಸಂಬಂಧಿಸಿದ 8 ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಆರಕ್ಷಕ ಉಪಾಧೀಕ್ಷಕರ ಕಛೇರಿಯಲ್ಲಿ ಮಧ್ಯಾಹ್ನ 11-15 ಘಂಟೆಯಿಂದ 12-30 ಘಂಟೆಯವರೆಗೆ ಜಪ್ತಿ ಪಂಚನಾಮೆ ಜರುಗಿಸಿ ದಾಖಲೆಗಳನ್ನು ವಶಪಡಿಸಿಕೊಂಡಿರುತ್ತಾರೆ.

6) ದಿನಾಂಕ 16/10/2014 ರಂದು ಶ್ರೀ ಸಂಗಪ್ಪ ಕಲ್ಲಪ್ಪ ವಡ್ಡೀನ, ಕರವಸೂಲಿ ಸಹಾಯಕ, ಹಾಗೂ ಶ್ರೀ ಸುರೇಶ ಹನುಮಂತಪ್ಪ ಪೂಜಾರ, ಕರವಸೂಲಿ ಸಹಾಯಕ, ಗದಗ ಬೆಟಗೇರಿ ನಗರ ಸಭೆ, ಗದಗ ಇವರನ್ನು ಪಂಚರಾಗಿ ಬರ ಮಾಡಿಕೊಂಡು ಇವರ ಸಮಕ್ಷಮ ಶ್ರೀ ಪ್ರಕಾಶ ರಾಚಪ್ಪ ಮುದಗಲ್, ಪ್ರ.ದ.ಲೆ.ಸ. ರವರು ತಮ್ಮ ಮೇಲಾಧಿಕಾರಿಗಳ ಸೂಚನೆಯಂತೆ ಗದಗ ಜಿಲ್ಲಾಡಳಿತ ಭವನ ಕಟ್ಟಡದ ಮುಂಭಾಗದ ಕಾಂಪೌಂಡ್ ಗೋಡೆ ದುರಸ್ತಿ ಕಾಮಗಾರಿಗೆ ಸಂಬಂಧಿಸಿದ ಪಾವತಿಯ ಮೂಲ ವೋಚರ್ ಪ್ರತಿಗಳ 7 ದಾಖಲಾತಿಗಳನ್ನು (ಪುಟ ಸಂಖ್ಯೆ 1 ರಿಂದ 49) ಹಾಜರುಪಡಿಸಿದ್ದು, ಅವುಗಳನ್ನು ಆರಕ್ಷಕ ಉಪಾಧೀಕ್ಷಕರ ಕಛೇರಿಯಲ್ಲಿ ಮಧ್ಯಾಹ್ನ 13-00 ಘಂಟೆಯಿಂದ 14-30 ಘಂಟೆಯವರೆಗೆ ಜಪ್ತಿ ಪಂಚನಾಮೆ ಜರುಗಿಸಿ ದಾಖಲೆಗಳನ್ನು ವಶಪಡಿಸಿಕೊಂಡಿರುತ್ತಾರೆ.

7) ಈ ಎಲ್ಲಾ ದಾಖಲಾತಿಗಳನ್ನು ತನಿಖಾಧಿಕಾರಿಗಳು ಕೂಲಂಕುಷವಾಗಿ ಪರಿಶೀಲಿಸಿದಾಗ ಕೆಳಕಂಡ ಕರ್ತವ್ಯ ಲೋಪಗಳು ಎದುರುದಾರರಿಂದ ಕಂಡುಬರುತ್ತವೆ ಎಂದು ನಮೂದಿಸಿದ್ದಾರೆ.

ಅ) ಗದಗ ಜಿಲ್ಲಾಡಳಿತ ಭವನದ ಮುಂದಿನ ಕಂಪೌಂಡ್ ಗೋಡೆಯ ನಿರ್ವಹಣಾ ಅವಧಿಯು ದಿನಾಂಕ 04/10/2013 ರ ವರೆಗೆ ಇದ್ದರೂ ಸಹ, ಕಂಪೌಂಡ್ ಗೋಡೆ ಕೆಡವಿ ಜೂನ್ 2013 ರಿಂದ ಅಗಸ್ಟ್ 2013 ರ ಅವಧಿಯಲ್ಲಿ ಹೊಸದಾಗಿ ಗ್ರಿಲ್ ಕಂಪೌಂಡ್ ನಿರ್ಮಾಣ ಮಾಡಲಾಗಿರುತ್ತದೆ.

ಆ) ಗದಗ ಜಿಲ್ಲಾ ಆಡಳಿತ ಭವನದ ಮುಂಭಾಗದ ಗ್ರಿಲ್ ಕಂಪೌಂಡ್ ನಿರ್ಮಾಣದ ಕಾಮಗಾರಿಗೆ ಯಾವುದೇ ನಿರ್ದಿಷ್ಟವಾದ ಅನುದಾನ ಇರುವುದಿಲ್ಲ.

ಇ) ಗದಗ ಜಿಲ್ಲಾ ಆಡಳಿತ ಭವನದ ಮುಂಭಾಗದ ಗ್ರಿಲ್ ಕಂಪೌಂಡ್ ನಿರ್ಮಿಸಲು ಲೋಕೋಪಯೋಗಿ ಇಲಾಖೆಯು ಯಾವುದೇ ರೀತಿಯ ಅಂದಾಜು ಪತ್ರಿಕೆಯನ್ನು ತಯಾರಿಸಿರುವುದಿಲ್ಲ.

ಈ) ಬೇಸ್ ಮೆಂಟ್ ಗ್ರಿಲ್ಲಿನ ಕಂಪೌಂಡ್ ನಿರ್ಮಾಣ ಮಾಡಲು ಬುಲೇಟಿನ್‌ನಲ್ಲಿ ಪ್ರಕಟಿಸಿರುವುದಿಲ್ಲ.

ಉ) ಬೇಸ್‌ಮೆಂಟ್ 8 ಅಡಿ ಗ್ರಿಲ್ಲಿನ ಕಂಪೌಂಡ್ ನಿರ್ಮಾಣ ಮಾಡಲು ಟೆಂಡರ್ ಪ್ರಕ್ರಿಯೆ ನಡೆಸಿರುವುದಿಲ್ಲ.

ಊ) ಅಂದಾಜು ಪತ್ರಿಕೆಗೆ, ಸಂಬಂಧಿಸಿದ ಪ್ರಾಧಿಕಾರದವರಿಂದ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆಯನ್ನು ಪಡೆದಿರುವುದಿಲ್ಲ.

ಋ) ಜೂನ್ 2013 ರಿಂದ ಅಗಸ್ಟ್ 2013 ರ ಅವಧಿಯಲ್ಲಿ ನಿರ್ಮಾಣಗೊಂಡ ಗ್ರಿಲ್ ಕಂಪೌಂಡ್ ಕಾಮಗಾರಿಗೆ ಫೆಬ್ರುವರಿ 2014 ರಲ್ಲಿ ತಯಾರಿಸಿದ ನಕಲಿ ಅಂದಾಜು ಪತ್ರಿಕೆಗೆ ಕಾರ್ಯ ವ್ಯಾಪ್ತಿಯ ಅಧೀಕ್ಷಕ ಅಭಿಯಂತರರಾದ ಎದುರುದಾರರು ಕಾಮಗಾರಿ ನಿರ್ವಹಣೆ ಆಗಿರುವುದು ಗೊತ್ತಿದ್ದೂ ಸಹ ಕಾರ್ಯನಿರ್ವಾಹಕ ಅಭಿಯಂತರರು, ಪಿ.ಡಬ್ಲ್ಯು.ಡಿ. ಗದಗರವರೊಂದಿಗೆ ಶ್ಯಾಮೀಲಾಗಿ ತಯಾರಿಸಿದ ನಕಲಿ ಅಂದಾಜು ಪಟ್ಟಿಗೆ ಅನುಮೋದನೆ ನೀಡಿ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿ ಕರ್ತವ್ಯ ಲೋಪ ಎಸಗಿರುತ್ತಾರೆ.

ಎ) ಗದಗ ಜಿಲ್ಲಾ ಆಡಳಿತ ಭವನದ ಮುಂದಿನ ಕಂಪೌಂಡ್ ಗೋಡೆಯನ್ನು ಕೆಡವಿ ಟೆಂಡರ್ ಪ್ರಕ್ರಿಯೆ ನಡೆಸದೆ ಹೊಸ 8

ಅಡಿಯ ಗ್ರಿಲ್ ಕಂಪೌಂಡ್ ನಿರ್ಮಾಣದ ಕಾಮಗಾರಿಯನ್ನು ಎದುರುದಾರರು ಜೂನ್ 2013 ರಿಂದ ಅಗಸ್ಟ್ 2013 ರ ಅವಧಿಯಲ್ಲಿ ಮಾಡಿದ ಕಾಮಗಾರಿಯನ್ನು ಮುಚ್ಚಿ ಹಾಕುವ ಉದ್ದೇಶದಿಂದ ಸದರಿ ಕಾಮಗಾರಿಗೆ ಪೂರಕವಾಗಿ ದಿನಾಂಕ 26/02/2014 ರಿಂದ ದಿನಾಂಕ 06/03/2014 ರ ಅವಧಿಯಲ್ಲಿ ಕಾಮಗಾರಿ ಮಾಡಿರುವುದಾಗಿ ಕ್ರಿಯಾ ಯೋಜನೆ, ಅಂದಾಜು ಪತ್ರಿಕೆ, ಟೆಂಡರ್ ಪ್ರಕ್ರಿಯೆ, ಕಾಮಗಾರಿ ಪೂರ್ಣಗೊಳಿಸಿದ ಬಗ್ಗೆ ವರದಿ, ಕಛೇರಿಯ ಆದೇಶ ಪ್ರತಿಗಳು, ಗ್ರಿಲ್ ಕಂಪೌಂಡ್ ಗೋಡೆಯ ನೀಲ ನಕ್ಷೆ, ಇತ್ಯಾದಿ ಸುಳ್ಳು ಸ್ಪಷ್ಟನೆ ನೀಡುವ, ಸುಳ್ಳು ಲೆಕ್ಕ ಬರೆದು ದಾಖಲಾತಿಗಳನ್ನು ಸೃಷ್ಟಿಸಿ ಎದುರುದಾರರು ಕರ್ತವ್ಯ ಲೋಪ ಎಸಗಿರುವುದಲ್ಲದೆ ಗದಗ ಜಿಲ್ಲಾ ಆಡಳಿತ ಭವನದ ಮುಂಭಾಗದಲ್ಲಿ ಮೊದಲು ಇದ್ದ ಕಾಂಪೌಂಡ್ ಗೋಡೆಯನ್ನು ತೆಗೆದು ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ನಡೆಸದೆ ಕೆಟಿಪಿಪಿ ಕಾಯ್ದೆ 1999 ನ್ನು ಉಲ್ಲಂಘಿಸಿ ಬೇಸ್‌ಮೆಂಟಿನಿಂದ 8 ಅಡಿ ಎತ್ತರದ ಗ್ರಿಲ್ ಕಾಂಪೌಂಡ್ ನಿರ್ಮಿಸಿ ಸುಮಾರು ರೂ. 60.00 ಲಕ್ಷ ಮೊತ್ತದ ಕಾಮಗಾರಿಯನ್ನು ನಿರ್ವಹಿಸಿ ಅಧಿಕಾರ ದುರ್ಬಳಕೆ ಮಾಡಿಕೊಂಡು ದುರ್ನಡತೆ ತೋರಿಸಿರುತ್ತಾರೆ.

8. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ದಿನಾಂಕ 25/01/2023 ರಂದು ತಮ್ಮ ಸಮಜಾಯಿಷಿಯನ್ನು ನಮ್ಮ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಗದಗ ಜಿಲ್ಲಾ ವಿಶೇಷ ನ್ಯಾಯಾಲಯದಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ವಿಶೇಷ ಪ್ರಕರಣ ಸಂಖ್ಯೆ 1/2016 ರಲ್ಲಿ ಪ್ರಕರಣದ ವಿಚಾರಣೆ ಕಾಲದಲ್ಲಿ ಲೋಕಾಯುಕ್ತ ಪೋಲೀಸರು ಸಲ್ಲಿಸಿದ ದೋಷಾರೋಪಣ ಪಟ್ಟಿಗಳಿಂದ ವಿಮುಕ್ತಗೊಳಿಸಿ ಆದೇಶಿಸಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಕರಣದ ಯಾವುದೇ

ಇಲಾಖಾ ವಿಚಾರಣೆ ಬಾಕಿ ಇರುವುದಿಲ್ಲವೆಂದು ಉಲ್ಲೇಖಿಸಿ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ, ಪ್ರಕರಣ ಸಂಖ್ಯೆ: ಎಸ್‌ಪಿಎಲ್. ಎಸ್‌ವಿಸಿ ಕೇಸ್ ನಂ. 01/2016 ದಿನಾಂಕ 31/05/2021 ರಂದು ಮೇಲ್ಕಂಡ ಸರ್ಕಾರಿ ನೌಕರ ಹಾಗೂ ಇತರರ ವಿರುದ್ಧ ತನಿಖಾಧಿಕಾರಿಗಳು ಸಲ್ಲಿಸಿದ ದೋಷಾರೋಪಣ ಪಟ್ಟಿಯ ಆಪಾದನೆಗಳಿಂದ ವಿಮುಕ್ತಗೊಳಿಸಿ ಆದೇಶಿಸಿದ್ದು ಇರುತ್ತದೆ ಎಂದು ಮಾತ್ರ ಉಲ್ಲೇಖಿಸಿರುತ್ತಾರೆ.

9. ಈ ಕಾರಣದಿಂದಾಗಿ ಮೇಲ್ಕಂಡ ಎದುರುದಾರರು ಈಗಾಗಲೇ ತಮ್ಮ ಮೇಲಿನ ಕ್ರಿಮಿನಲ್ ಪ್ರಕರಣದಲ್ಲಿ ದೋಷಾರೋಪಣ ಪಟ್ಟಿಯ ಆಪಾದನೆಗಳಿಂದ ವಿಮುಕ್ತಗೊಳಿಸಿದ ಕಾರಣ ಈ ಪ್ರಕರಣವನ್ನೂ ಸಹ ಮುಕ್ತಾಯಗೊಳಿಸಬೇಕು ಎಂದು ತಿಳಿಸಿರುತ್ತಾರೆ. ಸದರಿ ಕ್ರಿಮಿನಲ್ ಪ್ರಕರಣದ ಆದೇಶದ ಪುಟ ಸಂಖ್ಯೆ: 35, 51ನೇ ಕಂಡಿಕೆಯಲ್ಲಿ ನ್ಯಾಯಾಲಯವು ಉಲ್ಲೇಖಿಸಿರುವುದೇನೆಂದರೆ "Comprehensive reading of the allegations and the documents collected by him would make the court to feel that even if the A1 to A4 have committed the act of skipping procedures or shortening the period of construction or violated certain departmental procedures they are liable to the procedural departmental enquiry by **P.W.D.** or State Government" ಎಂದು ಆದೇಶಿಸಿರುವುದರಿಂದ ಎದುರುದಾರರು ನೀಡಿರುವ ಸಮಜಾಯಿಷಿ ಅಂಶದ ಮೇರೆಗೆ ಇಲಾಖಾ ವಿಚಾರಣೆಯನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣ ಕಂಡುಬರುವುದಿಲ್ಲ.

10. ಕ್ರಿಮಿನಲ್ ಕೋರ್ಟ್‌ನಲ್ಲಿ ಖುಲಾಸೆಗೊಳಿಸುವಿಕೆಯು ಯಾವುದೇ ಅಪರಾಧವನ್ನು ಮಾಡಿಲ್ಲ ಎಂಬ ಆಧಾರದ ಮೇಲೆ, ಆದಾಗ್ಯೂ, ಕರ್ತವ್ಯ ಲೋಪಕ್ಕಾಗಿ ಇಲಾಖಾ ವಿಚಾರಣೆಯ ಮೂಲಕ ವ್ಯವಹರಿಸಬಹುದು.

11. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಮತ್ತು ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮ 3 (1) (i ರಿಂದ iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

12. ಆದುದರಿಂದ ಎದುರುದಾರರ ಮೇಲೆ ಇಲಾಖಾ ವಿಚಾರಣೆ ನಡೆಸಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವುದು ಸೂಕ್ತವೆಂದು ಕಂಡುಬರುತ್ತದೆ.

13. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

2/5/23

(ನ್ಯಾಯಮೂರ್ತಿ ಬಿ. ಎಸ್. ಪಾಟೀಲ್)
ಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.